




# ಗುರುಗ್ರಾಮದಲ್ಲಿ ರಾಮಕೃಷ್ಣ ಮಿಷನ್ ಆರಂಭ

ಹರಿಯಾಣ ರಾಜ್ಯದಲ್ಲಿ ರಾಮಕೃಷ್ಣ ಮಿಷನ್ನಿನ ಮೊದಲ ಶಾಖಾಕೇಂದ್ರವು ಈ ವರ್ಷದ ಜಗದ್ಧಾತ್ರೀ ಪೂಜೆಯ ಶುಭದಿನ ದಂದು (ನವೆಂಬರ್ ೨, ೨೦೨೨ ರಂದು) ಆರಂಭವಾಯಿತು. ಗುರುಗ್ರಾಮದಲ್ಲಿ **'ರಾಮಕೃಷ್ಣ ಮಿಷನ್ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ವ್ಯಾಲ್ಯೂಸ್'** ಅನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಉದ್ಘಾಟಿಸಿದರು. ಈ ಪ್ರಯುಕ್ತ ನವೆಂಬರ್ ೧ ರಿಂದ ೩ರ ವರೆಗೆ ಮೂರು ದಿನಗಳ ವಿವಿಧ ಕಾರ್ಯಕ್ರಮಗಳು ನಡೆದವು. ಇದರಲ್ಲಿ ೧೫೦ ಮಂದಿ ಸಂನ್ಯಾಸಿಗಳು ಹಾಗೂ ಸುಮಾರು ೧೫೦೦ ಮಂದಿ ಭಕ್ತರು ಭಾಗವಹಿಸಿದ್ದರು.

ಮೊದಲ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ 'ರಾಮಕೃಷ್ಣ ಮಿಷನ್–೧೨೫ ವರ್ಷಗಳ ಸೇವಾಗಾಥೆ' ಎಂಬ ವಿಷಯವನ್ನು ಕುರಿತು ವಿಚಾರ ವಿನಿಮಯ ನಡೆಯಿತು. ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸುವೀರಾನಂದಜಿ ಮಹಾರಾಜ್ ಭಾಗವಹಿಸಿದ್ದರು. ಬೆಳಿಗ್ಗೆ ಸಂಘದ ಸಂನ್ಯಾಸಿಗಳಿಂದ ಭಜನೆ ಹಾಗೂ 'ರಾಮಚರಿತಮಾನಸ'ವನ್ನು ಕುರಿತ ಪ್ರವಚನ ನಡೆಯಿತು.

ದಿನಾಂಕ ೨ ರಂದು ನಡೆದ ಮೆರವಣಿಗೆಯೊಂದಿಗೆ ಪ್ರಭಾತ್ ಫೇರಿ ನಡೆಯಿತು. ಇದರಲ್ಲಿ ರಾಮಕೃಷ್ಣ ಮಹಾಸಂಘದ ಹಿರಿಯ ಸಾಧುಗಳು ದಿವ್ಯತ್ರಯರ ಭಾವಚಿತ್ರಗಳನ್ನು ಹೊತ್ತು ಮೆರವಣಿಗೆ ಬಂದರು; ಅವರೊಂದಿಗೆ ಇತರ ಸಾಧುಗಳು ಭಜನೆ, ವೇದಘೋಷಗಳೊಂದಿಗೆ ಪ್ರದಕ್ಷಿಣೆ ಬಂದರು. ಬೆಳಿಗ್ಗೆ ೭.೩೦ರ ಸುಮಾರಿಗೆ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಕೇಂದ್ರದ ಲೋಕಾರ್ಪಣೆಯನ್ನು ನೆರವೇರಿಸಿದರು. ನೂತನ ಮಂದಿರದಲ್ಲಿ ಸಾಧುಗಳು ಪುಷ್ಪಾಂಜಲಿ ನೆರವೇರಿಸಿದರು. ವಿಶೇಷ ಪೂಜೆ, ಹೋಮ ಇತ್ಯಾದಿಗಳು ೧೧.೦೦ ಗಂಟೆಗೆ ಪೂರ್ಣಗೊಂಡವು. ಹರಿಯಾಣ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಮನೋಹರಲಾಲ್ ಖಟ್ಟರ್ ಸಭಾಂಗಣವನ್ನು ಉದ್ಘಾಟಿಸಿದರು. ಅಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕೂಡ ಅವರು ವಿಶೇಷ ಅತಿಥಿಯಾಗಿದ್ದರು. 'ಸ್ವಾಮಿ ವಿವೇಕಾನಂದರ ಪ್ರಕಾರ ವಿದ್ಯಾಭ್ಯಾಸ' ಎಂಬ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಗೌತಮಾನಂದಜಿ ಮಹಾರಾಜ್ ಅಧ್ಯಕ್ಷ ಭಾಷಣವನ್ನು ಮಾಡಿದರು. ಸಂಜೆ ಪ್ರಸಿದ್ಧ ಹಿಂದೂಸ್ಥಾನೀ ಗಾಯಕಿ ಅಶ್ವಿನಿ ಭಿಡೆ ದೇಶಪಾಂಡೆಯವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವಿತ್ತು.

ದಿನಾಂಕ ೩ರಂದು ಸಾಧುಗಳಿಂದ ಭಜನೆ ಹಾಗೂ 'ಶಿಕ್ಷಣದ ಮೂಲಕ ಮೌಲ್ಯಜಾಗೃತಿ' ಎಂಬ ವಿಷಯವನ್ನು ಕುರಿತು ಸಾರ್ವಜನಿಕ ಸಭೆ ನಡೆಯಿತು. ಸಂಘದ ಸಂನ್ಯಾಸಿಗಳು ಹಾಗೂ ಈ ವಿಷಯದಲ್ಲಿ ಪರಿಣತರಾದ ಶ್ರೀ ವಿ.ಶ್ರೀನಿವಾಸ್ ಅವರು ಮಾತನಾಡಿದರು. ಬೆಳಿಗ್ಗೆ ನಡೆದ ಮಂತ್ರದೀಕ್ಷೆ ಕಾರ್ಯಕ್ರಮದಲ್ಲಿ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರಿಂದ ೪೭ ಮಂದಿ ದೀಕ್ಷೆಯನ್ನು ಸ್ವೀಕರಿಸಿದರು. ಸಂಜೆ 'ದಿವ್ಯತ್ರಯರ ದೃಷ್ಟಿಯಲ್ಲಿ ಸಾಧನೆ' ಎಂಬ ವಿಷಯದ ಬಗೆ ಮತ್ತೊಂದು ಸಭೆ ನಡೆಯಿತು. ರಾಮಕೃಷ್ಣ ಮಹಾಸಂಘದ ಸಹಕಾರ್ಯದರ್ಶಿಗಳಾದ ಸ್ವಾಮಿ ಬಲಭದ್ರಾನಂದಜಿ ಹಾಗೂ ಇನ್ನಿತರ ಸಾಧುಗಳು ಮಾತನಾಡಿದರು. ಸ್ವಾಮಿ ಗೌತಮಾನಂದಜಿ ಮಹಾರಾಜ್ ಆಶೀರ್ವಚನ ನೀಡಿದರು. ದೆಹಲಿ ರಾಮಕೃಷ್ಣ ಮಿಷನ್ನಿನ ಭಕ್ತರ ಭಜನೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020